## ನಿಯಮ 334ರ ಮೇರೆಗೆ

### ಪುತ್ತೂರು ತಾಲ್ಲೂಕಿನ ಕಡಬ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರುವ ಮಹಿಳಾ ವೈದ್ಯಾಧಿಕಾರಿಗಳವ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ

ಶ್ರೀ ಕೆ. ಕುಶಾಲ್.—ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಪುತ್ತೂರು ತಾಲ್ಲೂಕಿನ ಕಡಬ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಂಜೂರಾದ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಕಳೆದ ಎರಡು ವರ್ಷಗಳಿಂದ ಖಾಲಿ ಇರುವುದು ಮತ್ತು ಕೊಲ್ಲ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ವೈದ್ಯಾಧಿಕಾರಿಗಳ ಹುದ್ದೆ ಹಾಗೂ ಒಂದು ಕಾಂಪೌಂಡರ್ ಹುದ್ದೆ ೨-೩ ವರ್ಷಗಳಿಂದ ಖಾಲಿ ಇರುವುದು. ಅಲ್ಲದೆ ಈ ಆರೋಗ್ಯ ಘಟಕದಲ್ಲಿ ಯಾವುದೇ ಔಷಧಿಗಳು ಇಲ್ಲ. ನಿಯೋಜಿತ ಡಾಕ್ಟರ್ ತಿಂಗಳಿಗೊಮ್ಮೆ ಕೂಡಾ ಬರುತ್ತಿಲ್ಲ. ೩೦ ಕಿ.ಮಿ. ದೂರದ ನೆಲ್ಯಾಡಿ ಆರೋಗ್ಯ ಕೇಂದ್ರದಿಂದ ಸದ್ರಿಯವರು ಬರಬೇಕಾಗಿದೆ. ಅವರನ್ನು ವಿಚಾರಿಸಿದಾಗ ವೈದ್ಯಾಧಿಕಾರಿಗಳಿಗೆ ಆರೋಗ್ಯ ಕಾರ್ಯಕರ್ತೆಯರಿಗೆ ಕಳೆದ ಎರಡು ವರ್ಷಗಳಿಂದ ಪ್ರಯಾಣ ಭತ್ಯೆಕೂಡ ದೊರೆಯುತ್ತಿಲ್ಲವೆಂದು ಹೇಳುತ್ತಿದ್ದಾರೆ. ಈ ಕ್ಷೇತ್ರದ ಆರೋಗ್ಯ ಕೇಂದ್ರ ಘಟಕದಲ್ಲಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಕಡಬದಲ್ಲಿ ಕಟ್ಟಡ ರಿಪೇರಿ ಇಲ್ಲದೆ ಸ್ಥಳಾಭಾವದಿಂದ ತೊಂದರೆಯಾಗಿದೆ. ಆದುದರಿಂದ ಈ ಬಗ್ಗೆ ತೀಕ್ಷ್ಣ ಕ್ರಮ ಕೈಗೊಳ್ಳಬೇಕಾಗಿ ಸಚಿವರಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎಚ್. ಎಲ್ ತಿಮ್ಮೇಗೌಡ.—ಅಧ್ಯಕ್ಷರೇ, ನಾನು ಈಗಾಗಲೇ ಸದನದಲ್ಲಿ ಉತ್ತರಕೊಟ್ಟಿರುವ ಹಾಗೆ ಸುಮಾರು ೨೫೦ ಕ್ಕಿಂತಾ ಹೆಚ್ಚು ಹುದ್ದೆಗಳು ನಮ್ಮಲ್ಲಿ ಖಾಲಿ ಇವೆ. ಹಾಗೂ ಈಗಾಗಲೇ ೧೦೦ ಜನ ಮಹಿಳಾ ಮತ್ತು ೧೦೦ ಜನ ಪುರುಷ ವೈದ್ಯರ ಹುದ್ದೆಗಳಿಗೆ ಕೆ.ಪಿ.ಎಸ್.ಸಿ. ನಲ್ಲಿ ನೋಟಿಫೈ ಮಾಡಲಾಗಿದೆ. ಇದಕ್ಕೂ ಮುಂಚೆ ಯಾರು ನಿವೃತ್ತಿಹೊಂದಿದ್ದಾರೆ ಅವರನ್ನು ೯ ತಿಂಗಳ ಹಾಗೂ ೧ ವರ್ಷದ ಕಾಂಟ್ರಾಕ್ಟ್ ಮೇಲೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಇಷ್ಟೆಲ್ಲಾ ತೊಂದರೆ ಇದ್ದರೂ ಕೆಲವು ಕಡೆ ಏನು ಹೆಚ್ಚು ವೈದ್ಯರು ಇದ್ದಾರೆ ಅವರನ್ನು ತೆಗೆದು ಎಲ್ಲಿ ಹೆಚ್ಚು ಕಾಲದಿಂದ ವೈದ್ಯರು ಇಲ್ಲ ಅಲ್ಲಿಗೆ ಅವರನ್ನು ನೇಮಕ ಮಾಡುವ ಪ್ರಯತ್ನ ಮಾಡುತ್ತೇವೆ. ಇನ್ನು ಸದಸ್ಯರು ಔಷಧಿ ಬಗ್ಗೆ ಹೇಳಿದ್ದಾರೆ. ಇವತ್ತು ಏನು ಔಷಧಿ ಇದೆ ಅದನ್ನು ಆದಷ್ಟು ಜಾಗ್ರತೆ ವಿರ್ಜ ಮಾಡಬೇಕೆಂದು ಹೇಳಿದ್ದೇವೆ. ಇವತ್ತು ಪ್ರತಿ ಆರೋಗ್ಯ ಘಟಕಕ್ಕೂ ೮ ಸಾವಿರ ರೂ.ಗಳ ಔಷಧಿಯನ್ನು ಕೊಡುತ್ತೇವೆ. ಬೇಡಿಕೆ ಹೆಚ್ಚು ಬಂದರೆ ಸ್ಪೆಷಲ್ ಯೂನಿಟ್ ಕೊಡುತ್ತಿದ್ದೇವೆ. ಇನ್ನು ಕಟ್ಟಡದ ರಿಪೇರಿ ಬಗ್ಗೆ ಹೇಳಬೇಕೆಂದರೆ ಕಟ್ಟಡದ ಬೆಲೆ ಏನಿದೆ ಅದರ ಶೇಕಡಾ ೨ ರಷ್ಟು ಹಣವನ್ನು ಅದರ ರಿಪೇರಿಗೆ ಕೊಡಲಾಗುತ್ತಿದೆ. ಇವತ್ತು ಅದು ಸಾಲುತ್ತಿಲ್ಲ. ಆದ್ದರಿಂದ ಇದನ್ನು ಹೆಚ್ಚು ಮಾಡುವ ಬಗ್ಗೆ ಲೋಕೋಪಯೋಗಿ ಇಲಾಖೆ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಇವತ್ತು ನಮ್ಮ ಇಲಾಖೆ ಕಟ್ಟಡಗಳು ಅಷ್ಟೇ ಅಲ್ಲ ಬೇರೆ ಇಲಾಖೆ ಕಟ್ಟಡಗಳ ರಿಪೇರಿ ಹಾಗೂ ಮೈಂಟಿನೆನ್ಸ್ ಕಾಸ್ಟ್‌ನ್ನು ಹೆಚ್ಚು ಮಾಡುವುದು ಅವಶ್ಯಕ ಇದೆ. ಮಾನ್ಯ ಸದಸ್ಯರು ಏನು ಡಾಕ್ಟರ್ ಬಗ್ಗೆ ಹಾಗೂ ಕಟ್ಟಡದ ಬಗ್ಗೆ ಹೇಳಿದ್ದಾರೆ ಆ ಬಗ್ಗೆ ಪ್ರಯತ್ನ ಮಾಡುತ್ತೇನೆ.

### ಶಿವಮೊಗ್ಗ ಜಿಲ್ಲೆ, ಹೊಸನಗರ ಪುರಸಭೆಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆ ಹೊಸನಗರ ಪುರ ಸಭೆಗೆ ಕುಡಿಯುವ ನೀರಿನ ೨೬ಲಕ್ಷ ರೂ. ಯೋಜನೆ ಹಿಂದಿನ ಸರ್ಕಾರದಲ್ಲಿ ಮಂಜೂರಾಗಿದ್ದು ಅದಕ್ಕೆ ಬೇಕಾಗುವ ಪೈಪು ಗಳನ್ನು ಜಮಾ ಮಾಡಿದ್ದು ಎರಡು ವರ್ಷದಿಂದ ಯಾವ ಕೆಲಸವನ್ನು ಮಾಡಿಲ್ಲ. ಕೂಡಿಟ್ಟ ಪೈಪುಗಳನ್ನು ಕೆಲವರು ರಸ್ತೆಗಾಗಿ ಕೆಲವರು ಮನೆಗೂ ಕೆಲವರು ಗದ್ದೆಗೂ ಅವರವರ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಹೊಸನಗರದಲ್ಲಿ ಕುಡಿಯುವ ನೀರಿನ ಭವಣೆ ಹೆಚ್ಚಾಗಿದ್ದು ವಿದ್ಯಾರ್ಥಿನಿಲಯಗಳಲ್ಲಿ, ಆಸ್ಪತ್ರೆಗಳಲ್ಲಿ, ಸಾರ್ವಜನಿಕರಿಗೆ ಈ ಬೇಸಿಗಾಲದಲ್ಲಿಯೂ ತೊಂದರೆಯಾಗುತ್ತಿರುವುದನ್ನು ಸರ್ಕಾರದ ಗಮನಕ್ಕೆ ತಂದು ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಸದನದ ಗಮನ ಸೆಳೆಯುತ್ತೇನೆ.